# ಪರಿಸರ ಸ್ನೇಹಿ ಬೈಕ್ಸ್

ಹೊಗೆ ಉಗುಳುವ ಕಿರಿಕಿರಿ ಇಲ್ಲ, ಇಂಧನ ತುಂಬಿಸುವ ಅಗತ್ಯವಿಲ್ಲ, ಮಿತಿ ಮೀರುತ್ತಿರುವ ವಾಯುಮಾಲಿನ್ಯಕ್ಕೆ, ಕರಗುತ್ತಿರುವ ಇಂಧನ ಮೂಲಗಳಿಗೆ ಪರಿಹಾರದ ದಾರಿ ತೋರುತ್ತಿವೆ ಪರಿಸರಸ್ನೇಹಿ ಸೈಕಲ್‌ಗಳು. ಇವನ್ನು ಎಲೆಕ್ಟ್ರಿಕ್ ಸೈಕಲ್ ಅಥವಾ ಇ–ಬೈಕ್ಸ್ ಎಂದು ಕರೆಯುತ್ತಾರೆ. ಇವನ್ನು ಚಲಾಯಿಸುವುದಕ್ಕೆ ಪರವಾನಗಿ ಕೂಡ ಅಗತ್ಯವಿಲ್ಲದಿರುವುದರಿಂದ ಅಳುಕಿಲ್ಲದೇ ಪೆಡಲ್ ಮೇಲೆ ಕಾಲಿಡಬಹುದು. ನಮ್ಮ ದೇಶದಲ್ಲಿ ದೊರೆಯುತ್ತಿರುವ ಕೆಲವು ಇ–ಬೈಕ್‌ಗಳ ಮಾಹಿತಿ ಇಲ್ಲಿದೆ.

■ ಪೃಥ್ವಿರಾಜ್



### ವಿ ಇ-45

ವೇಗ: ಗಂಟೆಗೆ 25 ಕಿ.ಮೀ. ಬೆಲೆ: ₹21,000

ನೋಡಲು ಎಂಜಿನ್ ಇಲ್ಲದ ಸ್ಕೂಟರ್‌ನಂತೆ ಕಾಣುತ್ತದೆ. ಹೈದರಾಬಾದ್‌ನ ವರ್ಸಟೈಲ್ ಆಟೊ ಕಾಂಪೊನೇಟ್ ಸಂಸ್ಥೆ ಇದನ್ನು ತಯಾರಿಸಿದೆ. ಇದಕ್ಕೆ ಫ್ರೀ–ಲೆಡ್ ಆ್ಯಸಿಡ್ ಬ್ಯಾಟರಿ ಅಳವಡಿಸಲಾಗಿದೆ. ಒಮ್ಮೆ ಬ್ಯಾಟರಿಯನ್ನು ಫುಲ್‌ಚಾರ್ಜ್ ಮಾಡಿದರೆ, 45 ಕಿ.ಮೀ.ವರೆಗೆ ಹೋಗಬಹುದು. ವೇಗ ನಿಯಂತ್ರಣಕ್ಕೆ ಎರಡು ಡಿಸ್ಕ್ ಬ್ರೇಕ್‌ಗಳನ್ನು ಅಳವಡಿಸಲಾಗಿದೆ. 150 ಕೆ.ಜಿ. ತೂಕವನ್ನು ಹೊರುವ ಸಾಮರ್ಥ್ಯ ಹೊಂದಿದೆ. ಮಹಿಳೆಯರಿಗೆ ಅನುಕೂಲವಾಗುವಂತೆ ತಯಾರಿಸಲಾಗಿದೆ.

ಮಾಹಿತಿಗೆ: 9492234419 (ಬಿಸಿನೆಸ್ ವಾಟ್ಸ್‌ಆ್ಯಪ್ ಸಂಖ್ಯೆ)



### ಲೈಟ್ ಸ್ಪೀಡ್ ಡ್ರಿಫ್ಟ್

ವೇಗ: ಗಂಟೆಗೆ 50 ಕಿ.ಮೀ. ಬೆಲೆ: ₹ 42,999

ಗುಜರಾತ್‌ನ ಅಹಮದಾಬಾದ್‌ನ ಲೈಟ್ ಸ್ಪೀಡ್ ಸಂಸ್ಥೆ ಈ ಸೈಕಲ್ ತಯಾರಿಸಿದೆ. ಇದಕ್ಕೆ ಅಳವಡಿಸಿರುವ ಮೋಟಾರ್ 36 ವೋಲ್ಟ್ ಸಾಮರ್ಥ್ಯ ಹೊಂದಿದೆ. ಸೈಕಲ್‌ನ ಮುಂಭಾಗದಲ್ಲಿ ಪೋರ್ಟಬಲ್ ಬ್ಯಾಟರಿ ಅಳವಡಿಸಲಾಗಿದೆ. ಮೂರು ಗಂಟೆಯಲ್ಲಿ ಬ್ಯಾಟರಿ ಚಾರ್ಜ್ ಆಗುತ್ತದೆ. 100 ಕೆ.ಜಿ. ತೂಕ ಹೊರುವ ಸಾಮರ್ಥ್ಯ ಹೊಂದಿದೆ. ಮಾಹಿತಿಗೆ: https://lightspeed.bike/

### ಹೀರೊ ಲೆಕ್ಟ್ರೊ ಜೆಫಿರ್



ವೇಗ: ಗಂಟೆಗೆ 45 ಕಿ.ಮೀ. ಬೆಲೆ: ₹ 26,999

ಸೈಕಲ್ ತಯಾರಿಯಲ್ಲಿ ವಿಶಿಷ್ಟ ಛಾಪು ಮೂಡಿಸಿರುವ ಸಂಸ್ಥೆ ಹೀರೊ. ಈ ಸಂಸ್ಥೆ ತಯಾರಿಸಿರುವ ಇ–ಬೈಕ್ 'ಲೆಕ್ಟ್ರೊ ಜೆಫಿರ್'. ಬ್ಯಾಟರಿ ಸಹಾಯದಿಂದ ಈ ಸೈಕಲ್ ಅನ್ನು ಸುಲಭವಾಗಿ ಚಲಾಯಿಸಬಹುದು. ಹ್ಯಾಂಡಲ್ ಬಾರ್ ಬಳಿ ಇರುವ ಮೀಟರ್ ಬ್ಯಾಟರಿ ಚಾರ್ಜ್ ಎಷ್ಟಿದೆ ಎಂಬುದನ್ನು ತೋರಿಸುತ್ತದೆ. ಪೆಡಲ್ ಬಳಿಯೇ ಬ್ಯಾಟರಿ ರೀಚಾರ್ಜ್ ಮಾಡುವ ಸೌಲಭ್ಯವಿದೆ. ಇದರ ತೂಕ ಕೇವಲ 16 ಕೆ.ಜಿ. ಇರುವುದರಿಂದ ಹೊತ್ತೊಯ್ಯುವುದು ಸುಲಭ. ಸೈಕಲ್‌ನ ಪ್ರತಿ ಬಿಡಿ ಭಾಗಕ್ಕೂ ಪ್ರತ್ಯೇಕ ವಾರಂಟಿ ಕೂಡ ಇದೆ. ಇದಕ್ಕೆ ಲೀಥಿಯಂ ಅಯಾನ್ ಬ್ಯಾಟರಿ ಅಳವಡಿಸಲಾಗಿದೆ.

ಮಾಹಿತಿಗೆ: https://herocycles.com/LectroEZephyr/product/322

### ಯುಲು ಮಿರಾಕಿಲ್



ವೇಗ: ಗಂಟೆಗೆ 25 ಕಿ.ಮೀ. ಬೆಲೆ: ಇನ್ನೂ ನಿರ್ಧರಿಸಿಲ್ಲ

ಬೆಂಗಳೂರಿನ ಸೈಕಲ್ ಷೇರಿಂಗ್ ಸಂಸ್ಥೆ 'ಯುಲು' ಈ ಸೈಕಲ್ ಅನ್ನು ತಯಾರಿಸಿದೆ. ಈ ಸಂಸ್ಥೆ ನಗರದ ವಾಹನ ದಟ್ಟಣೆ ಇರುವ ಪ್ರದೇಶದಲ್ಲಿ ಈ ಸಂಸ್ಥೆ ಸೈಕಲ್‌ಗಳನ್ನು ಬಾಡಿಗೆಗೆ ನೀಡುತ್ತಿದೆ. ಇದಕ್ಕಾಗಿಯೇ ಮಿರಾಕಿಲ್ ಬೈಕ್ ತಯಾರಿಸಿದ್ದು, ಅದರ ಪ್ರಾಯೋಗಿಕ ಪರೀಕ್ಷೆ ಕೂಡ ನಡೆದಿದೆ. ಸದ್ಯಕ್ಕೆ 500 ಬೈಕ್‌ಗಳನ್ನು ತಯಾರಿಸಿದ್ದಾಗಿ ಸಂಸ್ಥೆ ಹೇಳಿದೆ. 48 ವೋಲ್ಟ್ ಸಾಮರ್ಥ್ಯ ಮೋಟಾರ್ ಅನ್ನು ಇದಕ್ಕೆ ಅಳವಡಿಸಲಾಗಿದೆ. ಇದರ ಕಾರ್ಯನಿರ್ವಹಣೆ ವ್ಯವಸ್ಥೆಯನ್ನು ಸರ್ವರ್‌ಗೆ ಜೋಡಿಸಿರುವುದರಿಂದ ಬ್ಯಾಟರಿ ಶಕ್ತಿ ಯಾವ ಪ್ರಮಾಣದಲ್ಲಿದೆ ಎಂಬುದನ್ನು ಸಂಸ್ಥೆ ಕಾಲಕಾಲಕ್ಕೆ ಮಾಹಿತಿ ನೀಡುತ್ತದೆ.

ಮಾಹಿತಿಗೆ: https://www.yulu.bike/about.html

### ಎಲೆಕ್ಟ್ರಾನ್ ಸೈಕಲ್

ವೇಗ: 35 ಕಿ.ಮೀ/ಗಂಟೆಗೆ ಬೆಲೆ: ₹ 33,999



ಎಲೆಕ್ಟ್ರಾನ್ ಸಂಸ್ಥೆಯು, 'ಎಂ 368 ಪ್ಲಸ್' ಹೆಸರಿನ ಇ–ಬೈಕ್ ತಯಾರಿಸಿದೆ. ಪರ್ವತ ಪ್ರದೇಶಗಳಲ್ಲೂ ಸುಲಭವಾಗಿ ಸಂಚರಿಸಲು ನೆರವಾಗುವಂತೆ ಇದನ್ನು ತಯಾರಿಸಲಾಗಿದೆ. ಇದಕ್ಕೆ ಅಳವಡಿಸಿರುವ ಗಾಲಿಗಳು ಭಾರೀ ಗಾತ್ರದಲ್ಲಿದ್ದರೂ ಕೇವಲ 21.5 ಕೆ.ಜಿ. ತೂಕವಿದೆ. ಎರಡೂ ಟೈರ್‌ಗಳಿಗೆ ಡಿಸ್ಕ್ ಬ್ರೇಕ್‌ಗಳನ್ನು ಅಳವಡಿಸಲಾಗಿದೆ. ಬ್ಯಾಟರಿ ರೀಡಿಂಗ್ ಮತ್ತು ಲೈಟ್‌ಗಳನ್ನು ಹ್ಯಾಂಡಲ್ ಬಳಿಯೇ ಅಳವಡಿಸಲಾಗಿದೆ.

ಮಾಹಿತಿಗೆ: https://elektroncycles.in

(ಬೆಲೆ ಮತ್ತು ವೈಶಿಷ್ಟ್ಯಗಳಲ್ಲಿ ವ್ಯತ್ಯಾಸಗಳಿರಬಹುದು) ■